9

ಇಲಾಖೆ / ವಿಷಯ : DEPARTMENT / SUBJECT: ಪ್ರಧಾನ ಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ

ದಿನಾಂಕ : DATE : 13/10/20

# ಗ್ರಾಮೀಣ ರೈತರಿಗೆ ಸ್ವಾಮಿತ್ವ ಬಲ

## ರಾಮನಗರದ 157 ಫಲಾನುಭವಿಗಳಿಗೆ ಪ್ರಧಾನಿಯಿಂದ ಆಸ್ತಿ ಕಾರ್ಡ್

ಉದಯವಾಣಿ 13/10/20

ನವದೆಹಲಿ: 'ಗ್ರಾಮೀಣ ಭಾಗದ ಜನರೇ ಇನ್ನು ಯಾರೂ ನಿಮ್ಮ ಆಸ್ತಿ ಲಪಟಾಯಿಸಲು ಸಾಧ್ಯವಿಲ್ಲ, ಸ್ವಾಮಿತ್ವ ಯೋಜನೆಯಿಂದ ಗ್ರಾಮೀಣ ಭಾರತದ ವರ್ಚಸ್ಸೇ ಬದಲಾಗಲಿದೆ'



-ಹೀಗೆಂದು ಹೇಳಿದ್ದು ಪ್ರಧಾನಿ ನರೇಂದ್ರ ಮೋದಿ. ಕರ್ನಾಟಕದ್ದು ಸೇರಿದಂತೆ ದೇಶದ 763 ಗ್ರಾಮಗಳ 1.32 ಲಕ್ಷ ಮಂದಿಗೆ ಡಿಜಿಟಲ್ ಆಸ್ತಿ ಪ್ರಮಾಣ ದಾಖಲೆಯನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ನೀಡುವ ಕಾರ್ಯಕ್ರಮ ದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಇದೊಂದು ಐತಿಹಾಸಿಕ ಕ್ರಮ ಎಂದು ಪ್ರಧಾನಿ ಬಣ್ಣಿಸಿದರು.

ಕರ್ನಾಟಕದ ರಾಮನಗರ ಜಿಲ್ಲೆಯ 4 ಗ್ರಾಮಗಳ 157 ಫಲಾನುಭವಿಗಳಿಗೂ ವಿಡಿಯೋ ಕಾನ್ಫರೆನ್ಸ್ ಮೂಲಕ ಆಸ್ತಿ ಕಾರ್ಡ್ ವಿತರಣೆ ಮಾಡಲಾಯಿತು.

ಸರ್ವೇ ಆಫ್ ವಿಲೇಜಸ್ ಆ್ಯಂಡ್ ಮ್ಯಾಪಿಂಗ್ ವಿದ್ ಇಂಪ್ರೂವೈಸ್ಡ್ ಟೆಕ್ನಾಲಜಿ ಇನ್ ವಿಲೇಜ್ ಏರಿಯಾಸ್ (ಸ್ವಾಮಿತ್ವ SVAMITVA) ಯೋಜನೆಯಡಿ ಮೊದಲ ಬಾರಿಗೆ ಗ್ರಾಮೀಣ ಪ್ರದೇಶದ ಜಮೀನಿನ ಅಳತೆಯನ್ನು ಡ್ರೋನ್ ಮೂಲಕ ನಡೆಸಲಾಗಿದೆ. ಮಾಲೀಕರಿಗೆ ಆಧಾರ್ ಮಾದರಿಯ ಕಾರ್ಡ್‌ಗಳನ್ನೂ ನೀಡಲಾಗುತ್ತದೆ.

ದೇಶದ ಅಭಿವೃದ್ಧಿಯಲ್ಲಿ ಆಸ್ತಿ ಮಾಲೀಕತ್ವ ಪ್ರಧಾನವಾಗಿ ಪ್ರಭಾವ ಬೀರುತ್ತದೆ ಎಂದು ಜಗತ್ತಿನ ಹಲವು ತಜ್ಞರು ಪ್ರತಿಪಾದಿಸುತ್ತಿದ್ದಾರೆ. ಜಗತ್ತಿನ ಒಟ್ಟು ಜನಸಂಖ್ಯೆ ಪೈಕಿ ಮೂರನೇ ಒಂದಂಶದಷ್ಟು ಜನರು ಮಾತ್ರ ಸೂಕ್ತ ರೀತಿಯಲ್ಲಿ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಹೊಂದಿದ್ದಾರೆ ಎಂದು ಪ್ರಧಾನಿ ಹೇಳಿದ್ದಾರೆ. ಮುಂದಿನ ಮೂರರಿಂದ ನಾಲ್ಕು ವರ್ಷಗಳ ಅವಧಿಯಲ್ಲಿ ದೇಶದ ಪ್ರತಿ ಗ್ರಾಮದ ನಿವಾಸಿಗೂ ಇದೇ ಮಾದರಿಯ ಆಸ್ತಿ ಮಾಲೀಕತ್ವದ ಕಾರ್ಡ್‌ಗಳನ್ನು ವಿತರಿಸಲು ಕೇಂದ್ರ ಸರ್ಕಾರ ಉದ್ದೇಶಿಸಿದೆ.

### ಕಾರ್ಡ್‌ನಲ್ಲಿ ಏನಿರುತ್ತೆ?

- ಜಮೀನಿನ ಮಾಲೀಕನ ಹೆಸರು
- ಸರ್ವೇ ನಂಬರ್
- ಜಮೀನಿನ ಅಳತೆ
- ಅದು ಇರುವ ಸ್ಥಳ
- ಮಾಲೀಕತ್ವದಲ್ಲಿ ಬದಲಾವಣೆಯ ವಿವರಗಳು
- ಸರ್ಕಾರಿ ಸಂಸ್ಥೆಗಳಿಂದ ಪಡೆದುಕೊಂಡಿರುವ ಸಾಲದ ಮಾಹಿತಿ
- ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದಾದರೂ ಖಟ್ಲೆಗಳು ಬಾಕಿ ಇದ್ದರೆ ವಿವರಗಳು
- ಈಗಾಗಲೇ ಪಾವತಿ ಮಾಡಿರುವ, ಮಾಡಬೇಕಾಗಿರುವ ತೆರಿಗೆಯ ವಿವರ.